*ಓ.ಎಸ್.ನಂ.48/2015*

*ಪಿ.ಡಬ್ಲ್ಯೂ-1*

***ದಿಃ 07-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಂದುವರಿದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಜಿಎಂ ವಕೀಲರಿಂದ***

ನಾನು ನ್ಯಾಯಾಲಯಕ್ಕೆ ಟ್ಯಾಕ್ಸ್ ಅಸಸ್ ಮೆಂಟ್ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ತೆರಿಗೆ ನಿರ್ಧರಣಾ ಪಟ್ಟಿಯ ನಾಲ್ಕು ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-18 ರಿಂದ ನಿಪಿ-21 ಎಂದು ಗುರುತಿಸಲಾಯಿತು. ಪಂಚಾಯಿತಿಯ ಮೂರು ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-22 ರಿಂದ ನಿಪಿ24 ಎಂದು ಗುರುತಿಸಲಾಯಿತು. ಕಟ್ಟಡ ಪರವಾನಗಿ ಎರಡು ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-25 ಮತ್ತು ನಿಪಿ-26 ಎಂದು ಗುರುತಿಸಲಾಯಿತು. ಒಟ್ಟು 7 ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-27 ಎಂದು ಗುರುತಿಸಲಾಯಿತು. ಪೊಲೀಸ್ ದೂರು ಮತ್ತು ಹಿಂಬರಹದ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-28 ಮತ್ತು ನಿಪಿ-29 ಎಂದು ಗುರುತಿಸಲಾಯಿತು. ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-30 ಎಂದು, ಮತದಾರರ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-31 ಎಂದು, ಆಧಾರ್ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-32 ಎಂದು, ಪೊಲೀಸರು ನೀಡಿದ ಆರು ತ್ರಿಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-33 ಎಂದು, ತಹಶೀಲ್ದಾರ್ ರವರ ಪತ್ರ ಹಾಗೂ ಭೂ ಮಾಪನ ಇಲಾಖೆಯ ಎರಡು ಹಿಂಬರಹಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-34 ರಿಂದ ನಿಪಿ-36 ಎಂದು, ಸ್ಕೆಚ್ಚಿನ ದೃಢೀಕೃತ ಪ್ರತಿಯನ್ನು ನಿಪಿ-37 ಎಂದು, ನಾಲ್ಕು ಪೋಟೋಗಳು ಹಾಗೂ ಅದರ ನೆಗೆಟಿವ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-38 ರಿಂದ ನಿಪಿ-42 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***